(VI) ವಿಷಯ : ಪಿರಿಯಾ ಪಟ್ಟಣದಲ್ಲಿ ಉಂಟಾಗಿರುವ ನಿಗೂಢ ಕಾಯಿಲೆ ಕುರಿತು.

ಶ್ರೀ ಸಿ.ಟಿ. ರವಿ(ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯ ಮಂತ್ರಿಗಳ ತವರು ಜಿಲ್ಲೆಯಲ್ಲಿ ನಿಗೂಢ ಕಾಯಿಲೆಯಿಂದ ಮಕ್ಕಳನ್ನು ಕುರೂಪಗೊಳಿಸಿ, ಅಂಗ ಊನಗೊಳಿಸಿ, ಅದರ ಮೂಲಕ ಮರಣಕ್ಕೆ ಕಾರಣವಾಗುತ್ತಿರುವುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನನಗೆ ಒಂದು ಉತ್ತರ ಬಂದಿದೆ, ಆದರೆ ನಾನು ಅಲ್ಲಿ ಸ್ಥಳೀಯವಾಗಿ ವಿಚಾರಣೆ ಮಾಡಿದಾಗ ಈ ಉತ್ತರ ಸಮಂಜಸವಾದುದಲ್ಲವೆಂದು ತಿಳಿದು ಬಂದಿದೆ, ಈ ಬಗ್ಗೆ ಸೂಕ್ತ ತನಿಖೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

† **ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ. ಮಕ್ಕಳನ್ನು ಕುರೂಪಗೊಳಿಸಿ, ಕೈಕಾಲುಗಳನ್ನು ಊನಗೊಳಿಸುವ ಮೂಲಕ ಜೀವ ಬಲಿ ತೆಗೆದುಕೊಳ್ಳುತ್ತಿರುವ ನಿಗೂಡ ಕಾಯಿಲೆ ಪಿರಿಯಾಪಟ್ಟಣ ತಾಲ್ಲೂಕಿನ ದೊಡ್ಡಹರವೆ ಗ್ರಾಮದಲ್ಲಿ ಪತ್ತೆಯಾಗಿದೆ, ಇಬ್ಬರು ಹೆಣ್ಣು ಮಕ್ಕಳು ಈಗಾಗಲೇ ಈ ಕಾಯಿಲೆಗೆ ತುತ್ತಾಗಿದ್ದು, ಅದರಲ್ಲಿ 7 ವರ್ಷದ ಮಗು ಈಗಾಗಲೇ ಮೃತಪಟ್ಟಿದ್ದು, 5 ವರ್ಷದ ಮಗುವಿನ ಸ್ಥಿತಿ ಚಿಂತಾಜನಕವಾಗಿದೆ. ಮುಖದ ತುಂಬ ಕಪ್ಪು ಮಚ್ಚೆಗಳು ಮೂಡಿ, ದೃಷ್ಟಿ ಹೀನರಾಗುತ್ತಾರೆ. ಅನಂತರ ಕೈಕಾಲು ಸ್ವಾಧೀನ ಕಳೆದುಕೊಂಡು ಅಂಗವಿಕಲರಾಗಿ ದೈಹಿಕ ಮತ್ತು ಮಾನಸಿಕವಾಗಿ ನರಳಾಡುವಂತಾಗುತ್ತದೆ.

ವರದಿ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪ ಪ್ರಾಥಮಿಕ ಕೇಂದ್ರ ವ್ಯಾಪ್ತಿಯಲ್ಲೇ ಬರುವ ದೊಡ್ಡಹರವೆ ಗ್ರಾಮದಲ್ಲಿ ವಾಸಿಸುತ್ತಿರುವ ಶ್ರೀ ಪ್ರಕಾಶ ಹಾಗೂ ಶ್ರೀಮತಿ ಸವಿತಾ ದಂಪತಿಗಳು 10 ವರ್ಷಗಳ ಹಿಂದೆ ಮದುವೆಯಾಗಿರುತ್ತಾರೆ. ಅವರ ಮದುವೆಯ ಬಹಳ ಹತ್ತಿರದ ಸಂಬಂಧದಲ್ಲಿ ನಡೆದಿರುವ ಮದುವೆ.

ಅವರಿಗೆ ಮೂರು ಮಕ್ಕಳು ಜನಿಸಿದ್ದು ಮಹದೇವಿ ಎಂಬ ಮೊದಲ ಮಗುವು ಮದುವೆಯಾದ ಒಂದು ವರ್ಷದ ನಂತರ ಜನಿಸಿ, ದಿನಾಂಕ 5–1–2004ರಲ್ಲಿ ಅಂದರೇ 8ನೇ ವಯಸ್ಸಿನಲ್ಲಿ ಮರಣಹೊಂದಿರುತ್ತಾಳೆ. ಮದುವೆಯಾದ 2 ವರ್ಷಗಳ ನಂತರ ಜನಿಸಿದ ಲಕ್ಷ್ಮಿ ಎಂಬ 2ನೇ ಮಗುವಿಗೆ ಈಗ 8 ವರ್ಷಗಳು ಮತ್ತು ಈಕೆ ಶಾರೀರಿಕ ಮತ್ತು ಮಾನಸಿಕ ತೊಂದರೆಗಳನ್ನು ಹೊಂದಿರುತ್ತಾಳೆ.

ಮದುವೆಯಾದ 4 ವರ್ಷಗಳ ನಂತರ ಜನಿಸಿದ ವರಲಕ್ಷ್ಮಿ ಎಂಬ ಇನ್ನೊಂದು ಮಗುವು ಆರೋಗ್ಯಕರವಾಗಿದೆ ಹಾಗೂ ಯಾವುದೇ ತೊಂದರೆಗಳನ್ನು ಹೊಂದಿಲ್ಲ.

ಲಕ್ಷ್ಮಿ ಎಂಬ 2ನೇ ಮಗುವನ್ನು ವೈದ್ಯಕೀಯ ಪರೀಕ್ಷೆ ಮಾಡಿದಾಗ ಈ ಕೆಳಕಂಡ ಲಕ್ಷಣಗಳು ಕಂಡು ಬಂದಿರುತ್ತವೆ

ಈ ಮಗುವು 3 ವರ್ಷಗಳ ಮಗುವಿನಂತೆ ಕಾಣುತ್ತಿದೆ ಹಾಗೂ 9 ಕೆ.ಜಿ.ಗಳ ತೂಕ ಹೊಂದಿದೆ. ವಯಸ್ಸಿಗೆ ತಕ್ಕಹಾಗೆ ಬೆಳವಣಿಗೆ ಇರದೆ ಕಡಿಮೆ ತೂಕದ್ದಾಗಿರುತ್ತದೆ, ಮಗುವು ಮೂಗಿಯಾಗಿದ್ದು ಸ್ವಲ್ಪ ಕಿವುಡುತನದಿಂದ ಬಳಲುತ್ತಿದೆ. ನರಗಳು ಬಹಳ ಕ್ಷೀಣಿಸಿರುವುದರಿಂದ ಮಗುವು ತನ್ನಷ್ಟಕ್ಕೆ ತಾನೇ ನಿಂತುಕೊಳ್ಳಲು ಹಾಗೂ ನಡೆಯಲು ಆಗುವುದಿಲ್ಲ.

ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಯ ಮೈಲಿಗಲ್ಲಿನ ಲಕ್ಷಣಗಳು ಸರ್ವೆಸಾಮಾನ್ಯವಾಗಿರದೆ ನಿಧಾನಗತಿಯದ್ದಾಗಿರುತ್ತದೆ.

ಎರಡೂ ಕಣ್ಣುಗಳ ದೃಷ್ಟಿದೋಷದ ತೊಂದರೆಯಿಂದ ಕುರುಡತನವಿರುತ್ತದೆ. ಒಣಗಿದ ಚರ್ಮ ಹಾಗೂ ಮುಖದ ಮೇಲೆ ಬಣ್ಣದ ಕಲೆಗಳು ಇರುತ್ತವೆ. ಮಗುವಿನ ತಲೆ ಸುತ್ತಳತೆ ಬಹಳ ಕಡಿಮೆ ಇದ್ದು ಬಹಳ ಸಣ್ಣದಾದ ಮೆದುಳು ಇರುವುದನ್ನು ಸೂಚಿಸುತ್ತದೆ.

ಮಗುವು ಪ್ರೋಟೀನ್ ಕೊರತೆಯಿಂದ 'ಚರ್ಮ ರೋಗದಿಂದ' (Xeroderma Pigmentosa),'ಮೆದುಳಿನ ಕ್ಷೀಣ ಬೆಳವಣಿಗೆ (Microcephaly) ಮತ್ತು ಮಾನಸಿಕ ಕುಂಠಿತ ಬೆಳವಣಿಗೆಯಿಂದ ನರಳುತ್ತಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

1999 ರಲ್ಲಿ ಮೈಸೂರಿನ ಜೆ.ಎಸ್.ಎಸ್.ಆಸ್ಪತ್ರೆಯಲ್ಲಿ ಈ ಮಗುವಿನ ವೈದ್ಯಕೀಯ ಪರೀಕ್ಷೆ ಮಾಡಲಾಯ್ತು, ಈಗ ಪ್ರೋಟೀನ್ ಅಂಶವಿರುವ ಪೌಷ್ಟಿಕ ಆಹಾರವನ್ನು ಸ್ಥಳೀಯ ಅಂಗನವಾಡಿ ಕೇಂದ್ರದಿಂದ ಪಡೆಯುತ್ತಿದೆ ಅದರ ಜೊತೆಗೆ ಚರ್ಮದ ತೊಂದರೆಗಳಿಗೆ ಸಂಬಂಧಪಟ್ಟ ಮುಲಾಮುಗಳನ್ನು ನೀಡಲಾಗುತ್ತಿದೆ ಹಾಗೂ ಫೋಲಿಕ್ ಆಮ್ಲದ ಮಾತ್ರೆಗಳು ಹಾಗೂ ಅನ್ನಾಂಗದ ಪೂರಕ ಆಹಾರಗಳನ್ನು ನೀಡಲಾಗುತ್ತಿದೆ. ಈಗ ಮಗುವಿನ ಆರೋಗ್ಯವು ಸುಧಾರಿಸುತ್ತಿದ್ದು, ಮುಂದಿನ ಕ್ರಮಕ್ಕಾಗಿ ಮೇಲ್ದರ್ಜೆಯ ಆಸ್ಪತ್ರೆಗೆ ಕಳುಹಿಸಲಾಗಿದೆ.

2002ನೇ ಇಸವಿಯಿಂದ ಈ 2ನೇ ಮಗು ಲಕ್ಷ್ಮಿಯ ತಿಂಗಳಿಗೆ ರೂ. 125/–ರಂತೆ ಅಂಗವಿಕಲರಿಗೆ ಕೊಡುವ ಮಾಸಾಶನ ಪಡೆಯುತ್ತಿದೆ ಎಂದು ತಿಳಿದುಬಂದಿದೆ. ಮಗುವಿನ ತಂದೆಯು ಕೃಷಿ ಕಾರ್ಮಿಕನಾಗಿದ್ದು ಆತನೊಬ್ಬನೇ ಕುಟುಂಬದಲ್ಲಿ ದುಡಿಯುವ ಸದಸ್ಯನಾಗಿರುತ್ತಾನೆ.

ಮಗುವಿನ ತಂದೆ ತಾಯಿಗಳ ಹೇಳಿಕೆ ಹಾಗೂ ವೈದ್ಯಕೀಯ ದಾಖಲೆ ಪ್ರಕಾರ, ದಿನಾಂಕ 5–1–2004 ರಂದು ಮರಣಹೊಂದಿದ ಮೊದಲ ಮಗುವಾದ ಮಹದೇವಿಯು ಬಹಳ ನಿಧಾನವಾದ ಶಾರೀರಿಕವಾದ ಮತ್ತು ಮಾನಸಿಕ ಬೆಳವಣಿಗಳ ಲಕ್ಷಣಗಳಿಂದ ಕೂಡಿದ್ದು ಮರಣ ಹೊಂದಿದೆ ಎಂದು ತಿಳಿದು ಬಂದಿದೆ.

ಕೊನೆಯ ಹಂತದಲ್ಲಿ ಮಗುವಿಗೆ ತೀವ್ರ ಜ್ವರ ಹಾಗೂ ಕೆಮ್ಮು ಇದ್ದುದರಿಂದ ಕುಶಾಲನಗರದಲ್ಲಿರುವ ಖಾಸಗಿ ವೈದ್ಯರಿಗೆ ತೋರಿಸಿದ್ದರೆಂದು ತಿಳಿದು ಬಂದಿದೆ, ಈ ಮಗುವು ಪದೇ ಪದೇ ಆಗುವ ಸೋಂಕಿನಿಂದ ನರಳಿ ರೋಗ ನಿರೋಧಕ ಶಕ್ತಿ ಇಲ್ಲದೆ ಮರಣ ಹೊಂದಿರಬಹುದೆಂದು ತಜ್ಞರ ಅಭಿಪ್ರಾಯವಾಗಿರುತ್ತದೆ.

ಮೊದಲ ಮತ್ತು ಎರಡನೇ ಮಕ್ಕಳಲ್ಲಿ ಕಾಣಬರುವ ಲಕ್ಷಣಗಳಾದ ಶಾರೀರಿಕ ಮತ್ತು ಮಾನಸಿಕ ಕುಂಠಿತ ಬೆಳವಣಿಗೆಯನ್ನು ಪರಿಶೀಲಿಸಿದಲ್ಲಿ ಇದು ವಂಶ ಪಾರಂಪರ್ಯದಿಂದ ಬಂದಿರುವ ನ್ಯೂನತೆಯೆಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

3ನೇ ಮಗುವು ಆರೋಗ್ಯವಾಗಿದ್ದು ಹಾಗೂ ಯಾವುದೇ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಯು ವಯಸ್ಸಿಗೆ ತಕ್ಕಂತೆ ಕುಂಠಿತವಾಗಿರುವುದಿಲ್ಲ. ಈ ಮಗುವು ಈಗ ಅಂಗನವಾಡಿ ಕೇಂದ್ರಕ್ಕೆ ದಾಖಲಾಗಿದೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನೀವು ಈಗ ಇಲ್ಲಿ ತನಿಖೆ ಮಾಡಬೇಕಾಗಿರುವುದು ಏನೆಂದರೆ, ಸಾವಿರಾರು ಬಾರಿ ನಾವು ಆಸ್ಪತ್ರೆಗೆ ಹೋದಾರೂ ಕೂಡ ಡಾಕ್ಟರ್‌ಗಳೂ ಉಪೇಕ್ಷೆ ಮಾಡಿದರು ಎಂದು ಆ ದಂಪತಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮತ್ತು ಕೇವಲ ಮುಲಾಂ ಕೊಟ್ಟು ಮಾತ್ರೆ ಕೊಟ್ಟು ಕಳುಹಿಸುತ್ತಿದ್ದರು. ವಿವರವಾದ ಪರೀಕ್ಷೆ ಮಾಡಲಿಲ್ಲ ಹಾಗಾಗಿ ನಮ್ಮ ಮಗು ಮೃತಪಟ್ಟಿತು ಎಂದು ಅವರು ತಿಳಿಸಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕು. ಇವತ್ತಿನ ಕಾಲದಲ್ಲಿ ಕೂಡ ಪ್ರಾಥಮಿಕ ಆರೋಗ್ಯಕ್ಕೆ ಕೂಡ ಬಡವರು ವೈದ್ಯಕೀಯ ಚಿಕಿತ್ಸೆ ಇಲ್ಲದೆ ವಂಚಿತರಾಗತ್ತಿರುವುದು ಸರ್ವೇ ಸಾಮಾನ್ಯವಾಗಿರುವ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

(vii) ವಿಷಯ : ಅಂಗನವಾಡಿ ಕಾರ್ಯಕರ್ತರ ಧರಣಿ ಕುರಿತು.

† **ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಅಧ್ಯಕ್ಷರೆ, ರಾಜ್ಯದಾದ್ಯಂತ ಸುಮಾರು 20,000ಕ್ಕಿಂತ ಹೆಚ್ಚು ಜನ ಅಂಗನವಾಡಿ ಕಾರ್ಯಕರ್ತೆಯರು ಇವತ್ತೂ ಕೂಡ ಕೆಲಸವನ್ನು ಸ್ಥಗಿತಗೊಳಿಸಿ ಬೆಂಗಳೂರಿಗೆ ಬಂದಿದ್ದಾರೆ. ಮೊನ್ನೆ ಒಂದು ವಾರದ ಹಿಂದೆ ಕೂಡ ಸುಮಾರು 25,000 ಕ್ಕೂ ಹೆಚ್ಚು ಜನ ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿಗೆ ಬಂದಿದ್ದರು. ಇವರು ಹೋರಾಟ ಮಾಡುತ್ತಲೇ ಬಂದಿದ್ದಾರೆ. ಒಂದು ಹೇಳಬೇಕೆಂದರೆ, ನಾವು ಪಂಚಾಯಿತಿ ನೌಕರರಿಗೆ ಕೊಟ್ಟ ಹಾಗೆ, ಪಂಚಾಯಿತಿಯಲ್ಲಿ ಸಂಬಳ, ಮತ್ತು ಪಂಚಾಯಿತಿಯ ಕಂಟ್ರೋಲ್‌ಗೆ ಕೊಟ್ಟಿರುವುದರಿಂದ ಕೆಲವು ಕಿರಿಕಿರಿಗಳನ್ನು ಅನುಭವಿಸುತ್ತಿದ್ದಾರೆ. ಮೊನ್ನೆ ದಿವಸ ರಜೆ ಹಾಕಿದರೆ ಆ ಪಂಚಾಯಿತಿ ಮೆಂಬರ್ ಹೇಳುತ್ತಾರೆ, ಸ್ವಲ್ಪ ನನಗೆ ಕೇಳುವುದಕ್ಕೆ ಹೇಳಿ ನಾನು ಮೊನ್ನೆ ದಿವಸ ಅಂಗನವಾಡಿಗೆ ಹೋದಾಗ ಏನೋ ತೊಂದರೆ ಕೊಟ್ಟಿದ್ದರು ಆ ರಜೆ ಮಂಜೂರು ಮಾಡಬೇಕೋ ಬೇಡವೆಂದು ಹೇಳುತ್ತೇನೆಂದು ಹೇಳಿದ್ದರಂತೆ. ಇಂತಹ ಅನೇಕ ಕಿರಿಕಿರಿಗಳನ್ನು ಅನುಭವಿಸುತ್ತಿದ್ದಾರೆ. ಅದರ